# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ ಎ<br>**Part – IV A** | ಬೆಂಗಳೂರು, ಗುರುವಾರ, ೨೬, ಆಗಸ್ಟ್, ೨೦೨೧ (ಭಾದ್ರಪದ, ೦೪, ಶಕವರ್ಷ, ೧೯೪೩)<br>**BENGALURU, THURSDAY, 26, AUGUST, 2021 (BHADRAPADA, 04, SHAKAVARSHA, 1943)** | ನಂ. ೭೫೦<br>**No. 750** |


**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ಸಿಆಸುಇ 10 ಎಆರ್ ಬಿ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು,
ದಿನಾಂಕ: 26.08.2021

**<u>ಅಧಿಸೂಚನೆ</u>**

ಭಾರತ ಸಂವಿಧಾನದ 166ನೇ ಅನುಚ್ಛೇದದ ಕಲಂ (2) ಮತ್ತು (3) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977, ಇದಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದ್ದಾರೆ. ಎಂದರೆ,-

**1. <u>ಶೀರ್ಷಿಕೆ ಮತ್ತು ಪ್ರಾರಂಭ</u>**, - 1) ಈ ನಿಯಮಗಳನ್ನು ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

2)ಇವುಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರುತ್ತವೆ.

**2. <u>ಅನುಸೂಚಿ XVI ಕ್ಕೆ ತಿದ್ದುಪಡಿ</u>**, - ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ರ (ಇನ್ನು ಮುಂದೆ ಸದರಿ ನಿಯಮಗಳೆಂದು ಕರೆಯಲಾಗುವ) ಅನುಸೂಚಿ XVI ರಲ್ಲಿ, **"ಸಮಾಜ ಕಲ್ಯಾಣ ಇಲಾಖೆ"** ಶೀರ್ಷಿಕೆಯ ಅಡಿಯಲ್ಲಿ **"ಎ. ಸಮಾಜ ಕಲ್ಯಾಣ"** ಉಪಶೀರ್ಷಿಕೆಯಡಿ, ಕ್ರಮ ಸಂಖ್ಯೆ 1ರಲ್ಲಿನ **"ಪರಿಶಿಷ್ಟ ಪಂಗಡಗಳು, ಮತ್ತು ಅಲೆಮಾರಿ ಮತ್ತು ಅರೆ ಅಲೆಮಾರಿ ಮತ್ತು ಅಧಿಸೂಚನೆಯಿಂದ ತೆಗೆದು ಹಾಕಿದ ಬುಡಕಟ್ಟುಗಳ"** ಎಂಬ ಪದಗಳನ್ನು ಕೈಬಿಡತಕ್ಕದ್ದು.

**3. <u>ಹೊಸ ಅನುಸೂಚಿ XXVIII ರ ಸೇರ್ಪಡೆ</u>**, - ಸದರಿ ನಿಯಮಗಳ ಅನುಸೂಚಿ XXVII ರ ನಂತರ, ಈ ಕೆಳಗಿನ ಹೊಸ ಅನುಸೂಚಿಯನ್ನು ಸೇರ್ಪಡೆ ಮಾಡತಕ್ಕದ್ದು, ಎಂದರೆ,-

## “ಅನುಸೂಚಿ XXVIII

## ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

### ಎ. ಪರಿಶಿಷ್ಟ ಪಂಗಡಗಳ ಕಲ್ಯಾಣ

1. ಪರಿಶಿಷ್ಟ ಪಂಗಡಗಳ, ಅಲೆಮಾರಿ, ಅರೆ ಅಲೆಮಾರಿ ಮತ್ತು ಅಧಿಸೂಚನೆಯಿಂದ ತೆಗೆದುಹಾಕಿದ ಬುಡಕಟ್ಟುಗಳ ಸ್ಥಿತಿಗತಿಯನ್ನು ಉತ್ತಮಗೊಳಿಸುವುದು.
2. ಸಮುದಾಯಗಳ ವರ್ಗೀಕರಣ.
3. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ.
4. ಸಾಮಾನ್ಯ ವಿದ್ಯಾರ್ಥಿ ನಿಲಯಗಳು, ನಿಮ್ನ ವರ್ಗದ ವಿದ್ಯಾರ್ಥಿ ನಿಲಯಗಳು.
5. ಪರಿಶಿಷ್ಟ ಪಂಗಡಗಳ ಕಲ್ಯಾಣ ನಿರ್ದೇಶಕರ ಕಛೇರಿಗೆ ಸಂಬಂಧಿಸಿದ ವಿಷಯಗಳು.
6. ರಾಜ್ಯದಲ್ಲಿನ ಮಹಿಳಾ ಮತ್ತು ಮಕ್ಕಳ ಅನಾಥಾಲಯಗಳನ್ನು ಹೊರತುಪಡಿಸಿ ಮಾನ್ಯತೆ ಪಡೆದ ಅನಾಥಾಲಯಗಳ ಆಡಳಿತ ಮತ್ತು ಅವುಗಳಿಗೆ ಸಹಾಯಾನುದಾನ ಬಿಡುಗಡೆ.
7. ಸಾರ್ವಜನಿಕ ಸೇವೆಗಳಲ್ಲಿನ ನೇಮಕಗಳಿಗೆ ಸಂಬಂಧಿಸಿದ ಮೀಸಲಾತಿ ಆದೇಶಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದಕ್ಕಾಗಿ ಉದ್ಯೋಗ ಘಟಕ.

### ಬಿ. ಸಂಹಿತೆಗಳು ಮತ್ತು ಕೈಪಿಡಿಗಳು

ತನ್ನ ಆಡಳಿತ ನಿಯಂತ್ರಣದಡಿಯಲ್ಲಿನ ಇಲಾಖೆಗಳ ಸಂಬಂಧದಲ್ಲಿ ಸಂಹಿತೆಗಳನ್ನು ಮತ್ತು ಕೈಪಿಡಿಗಳನ್ನು ಸಿದ್ಧಪಡಿಸುವುದು.

### ಸಿ. ನೌಕರಿ ಭರ್ತಿ ನಿಯಮಗಳು ಮತ್ತು ನೇಮಕಗಳು

1. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಆಡಳಿತ ನಿಯಂತ್ರಣದಡಿಯಲ್ಲಿ ಬರುವ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ಸಂಬಂಧಿಸಿದ ನೌಕರಿ ಭರ್ತಿ ನಿಯಮಗಳು
2. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಡಿಯಲ್ಲಿ ಬರುವವರನ್ನು ಹೊರತುಪಡಿಸಿ ತನ್ನ ಆಡಳಿತ ನಿಯಂತ್ರಣದ ಅಡಿಯಲ್ಲಿರುವ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದ ನೇಮಕಗಳು, ಸ್ಥಳ ನಿಯುಕ್ತಿಗಳು, ವರ್ಗಾವಣೆಗಳು, ರಜೆ ಮೊದಲಾದವುಗಳು.
3. ಭಾರತ ಸಂವಿಧಾನದ ಕಲಂ 371 (ಜೆ)ರಡಿ ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದ ವಿಷಯಗಳು.”

ಸಹಿ/-
(ಥಾವರ್‌ಚಂದ್ ಗೆಹ್ಲೋಟ್)
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ನಾಗರತ್ನ ವಿ. ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

## KARNATAKA GOVERNMENT

No: DPAR 10 ARB 2021

Karnataka Government Secretariat
Vidhana Soudha, Bengaluru
Dated:26.08.2021

## NOTIFICATION

In exercise of the powers conferred by clauses (2) and (3) of Article 166 of Constitution of India, the Governor of Karnataka hereby makes the following rules further to amend the Karnataka Government (Allocation of Business) Rules, 1977, namely :-

**1. Title and Commencement :-** 1) These rules may be called the Karnataka Government (Allocation of Business) (Amendment) Rules, 2021.

2) They shall come into force from the date of their publication in the Official Gazette.

**2. Amendment of Schedule XVI :-** In the Karnataka Government (Allocation of Business) Rules, 1977, (hereinafter referred to as the said rules), in SCHEDULE XVI under the heading " **Social welfare department**", under the sub-heading "**A. Social welfare**" in serial no. 1 the words "Scheduled Tribes and nomadic, Semi-nomadic and de-notified Tribes" shall be omitted.

**3. Insertion of New Schedule XXVIII: -** After Schedule XXVII of the said rules, the following new schedule shall be inserted, namely, -

### "SCHEDULE XXVIII

### TRIBAL WELFARE DEPARTMENT

### A. Tribal Welfare

1. Amelioration of Scheduled Tribes, Nomadic, Semi-nomadic and de-notified Tribes.
2. Classification of Communities.
3. Karnataka Maharshi Valmiki Scheduled Tribes Development Corporation Limited.
4. General hostels, Depressed class hostels.
5. Matters relating to the Office of the Director of Tribal Welfare.
6. Administration and release of Grand-in-Aid to the recognised orphanages other than Women and Children orphanages in the State.
7. Employment cell for monitoring the implementation of reservation orders relating to appointment in public services.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## B. Codes and Manuals

Preparation of Codes and Manuals in respect of Departments under its administrative control.

## C. Recruitment rules and Appointments

1. Recruitment rules relating to the services and posts under the administrative control of the Tribal Welfare Department.
2. Appointments, postings, transfers, leave etc., to officers and staff working in the department under its administrative control except those coming under the Department of Personnel and Administrative Reforms.
3. Matters relating to implementation of Article 371(J) of the Constitution of India."

Sd/-
(THAAWARCHAND GEHLOT)
GOVERNOR OF KARNATAKA.

By Order and in the name of the
Governor of Karnataka

(Nagarathna V. Patil)
Under Secretary to Government
Department of Personnel and Administrative
Reforms (Service Rules-2)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE
Date: 2021.08.26 17:13:41 +05'30'